Reliant
Shaping Concrete since 1992
HUME PIPES & PAVERS
Office: Lobo Complex, Kuthar, Mangalore - 17.
Ph: +91 824 2461880, 6552280. Factory: N.H. 66, Kuloor, Mangalore - 2.
Ph: +91 7022002644, 9900248382, 9343567716

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENT LIBRARY

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶನಿವಾರ, ಜನವರಿ 28, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು 16+4 (UDP 8, KUK 6,

▸▸ ಅಡ್ಯಾರ್ ಸಹ್ಯಾದ್ರಿ ಶಿಕ್ಷಣ ಸಂಸ್ಥೆ

# ರಾಷ್ಟ್ರಮಟ್ಟದ ಏರೋ ಮಾದರಿ ಸ್ಪರ್ಧೆಗೆ ಚಾಲನೆ

**ಅಡ್ಯಾರ್,** ಜ. 27: ಏರೋನಾಟಿಕ್ಸ್ ಕ್ಷೇತ್ರದಲ್ಲಿ ವಿಶಾಲದೃಷ್ಟಿಕೋನವಿರಿಸಿಕೊಂಡು ಅಡ್ಯಾರ್‌ನ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಆಡಳಿತಾತ್ಮಕ ಕಾಲೇಜಿನಲ್ಲಿ ಎರಡು ದಿನಗಳ ಕಾಲ ಆಯೋಜಿಸಲಾಗಿರುವ ಏರೋ ಮಾದರಿ ರಾಷ್ಟ್ರಮಟ್ಟದ ಸ್ಪರ್ಧೆ ಹಾಗೂ ಏರೋ ಶೋ 'ಏರೋಫಿಲಿಯಾ-2017' ಶುಕ್ರವಾರ ಉದ್ಘಾಟನೆಗೊಂಡಿತು. ಶನಿವಾರವೂ ಸ್ಪರ್ಧೆ ನಡೆಯಲಿದ್ದು, ಸಂಜೆ ಸಮಾರೋಪ ಜರಗಲಿದೆ.



ಸಹ್ಯಾದ್ರಿ ಶಿಕ್ಷಣ ಸಂಸ್ಥೆಯಲ್ಲಿ ಏರೋ ಮಾದರಿ ಸ್ಪರ್ಧೆ ಶುಕ್ರವಾರ ಉದ್ಘಾಟನೆಗೊಂಡಿತು.

ದೇಶದ ವಿವಿಧ ರಾಜ್ಯಗಳಿಂದ ಸುಮಾರು 400 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ತಿರುವನಂತಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ (ಐಐಎಸ್‌ಟಿ) ಸುರತ್ಕಲ್ ಎನ್‌ಐಟಿಕೆ, ಎಐಎಸ್‌ಎಸ್ ಎಂಎಸ್, ಎನ್‌ಎಂಎಎಂ, ಮೌಂಟ್ ಕಾರ್ಮೆಲ್ ಸೆಂಟ್ರಲ್ ಸಹಿತ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಕರಾವಳಿಯ ಶ್ರೀ ರಾಮಕೃಷ್ಣ ಕಾಲೇಜು, ಶ್ರೀನಿವಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಿಲಾಗ್ರಿಸ್, ಮಣಿಪಾಲ್ ಸ್ಕೂಲ್ (ಅತ್ತಾವರ) ಮುಂತಾದ ಹಲವು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಪಾಲ್ಗೊಂಡರು. ಡ್ರೋಣ್ ವಿಭಾಗದಲ್ಲೂ ಸ್ಪರ್ಧೆ ಆಯೋಜಿಸಿರುವುದು ಈ ಬಾರಿಯ ವಿಶೇಷ.

ದುಬೈ ಕಸ್ಟಮ್ಸ್ ಉದ್ಯೋಗಿ ಅಬ್ದುಲ್ಲಾಹ್ ಫಹೀಮ್ ಮಾದರಿ ವಿಮಾನಗಳ ಪ್ರದರ್ಶನಕ್ಕಾಗಿಯೇ ಭಾರತಕ್ಕೆ ಆಗಮಿಸಿದ್ದು, ಗಮನೀಯವಾಗಿತ್ತು. ನಾಸಾ ಏಮ್ಸ್ ಸಂಶೋಧನ ಕೇಂದ್ರದ ಡಾ। ಪರಿಮಳ್ ಕೋಪಾಡ್ಕರ್ ಅವರ ಪ್ರದರ್ಶನ ನಡೆಯಿತು. ಭಾರತ ಹಾಗೂ ದುಬೈಯ ಟೀಮ್- 5ನ ವೃತ್ತಿಪರ ತಂಡದಿಂದ 3ಡಿ ಹೆಲಿಕಾಪ್ಟರ್ ಶೋ ಪ್ರದರ್ಶನ ಗಮನ ಸೆಳೆಯಿತು. ಡಿಆರ್‌ಡಿಓ, ಏರ್ ಫೋರ್ಸ್, ಇಸ್ರೋ ಹಾಗೂ ಐಐಎಸ್ಸಿಗಳಿಂದ ನುರಿತ ಪರಿಣತರು ಆಗಮಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಏರೋ ಮಾಡೆಲಿಂಗ್, ಡ್ರೋಣ್ ಸ್ಪರ್ಧೆ ಹಾಗೂ ಇತರ ಸ್ಪರ್ಧೆಗಳಿಗೆ ಆಕರ್ಷಕ ಬಹುಮಾನಗಳನ್ನು ಶನಿವಾರ ಪ್ರದಾನ ಮಾಡಲಾಗುತ್ತದೆ. ಸಹ್ಯಾದ್ರಿ ಕಾಲೇಜಿನ ಟೀಮ್ ಚಾಲೆಂಜರ್ಸ್ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ವಿದ್ಯಾರ್ಥಿಗಳ ತಂಡ ಏರೋನಾಟಿಕ್ಸ್ ಮತ್ತು ರೊಬೊಟಿಕ್ ಕ್ಷೇತ್ರದಲ್ಲಿ ಪರಿಣತಿ ಪಡೆದಿದ್ದಾರೆ. ಜ.28ರಂದು ವಿವಿಧ ಸ್ಪರ್ಧೆಗಳು ನಡೆಯಲಿದ್ದು, ಮಧ್ಯಾಹ್ನ 3.30ಕ್ಕೆ ಗಾಳಿಪಟ ಸ್ಪರ್ಧೆ ಆಯೋಜಿಸಲಾಗಿದೆ. ಬಳಿಕ ಸಮಾರೋಪ ಸಮಾರಂಭ ನಡೆಯಲಿದೆ.

ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ದೇಶಕ ಜೆ.ಟಿ. ರಾಧಾಕೃಷ್ಣ ಅವರು ಸ್ಪರ್ಧೆ ಉದ್ಘಾಟಿಸಿ, ಮಂಗಳೂರಿನಲ್ಲಿ ರಾಷ್ಟ್ರೀಯ ಮಟ್ಟದ ಏರೋ ಮಾಡೆಲಿಂಗ್ ವಿಭಾಗದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿರುವುದು ಶ್ಲಾಘನೀಯ. ವಿಮಾನಯಾನ ವಿಭಾಗದಲ್ಲಿ ಪ್ರಸ್ತುತ ಅವಕಾಶಗಳು ಅಧಿಕವಾಗಿ ಲಭ್ಯವಾಗಿರುವ ನೆಲೆಯಲ್ಲಿ ಇದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಪೂರಕ ಎಂದರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್. ಮಂಜುನಾಥ ಭಂಡಾರಿ, ಮಂಗಳೂರು ವಿಮಾನ ನಿಲ್ದಾಣದ ಮಾಜಿ ನಿರ್ದೇಶಕ ಎಂ.ಆರ್. ವಾಸುದೇವ, ಇಸ್ರೋ ಮಾಜಿ ವಿಜ್ಞಾನಿ ಡಾ। ಎಂ.ಎಸ್. ಭಟ್, ಪ್ರಮುಖರಾದ ಪ್ರೊ। ಬಿ. ಆರ್.ಕುಲಕರ್ಣಿ, ರಜನೀಕಾಂತ್ ಶಾಸ್ತ್ರೀ, ಪ್ರೊ। ಬಿ.ಎನ್. ಕರ್ಕೇರ, ಪಿ.ಸಿ. ಪ್ಯಾಂಟ್, ಪದ್ಮಾವತಿ ಸಹಿತ ಹಲವು ಗಣ್ಯರು ಉಪಸ್ಥಿತರಿದ್ದರು.

www.vijaykarnataka.com
ಸಂಪುಟ: 16 | ಸಂಚಿಕೆ: 183
ಶನಿವಾರ, 28 ಜನವರಿ 2017 | ಪುಟಗಳು: 14+4+4+6 | ಬೆಲೆ: ₹ 4.00
VK
# ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ನಾನು ನಿರಪರಾಧಿ; ಕೃಷ್ಣಮೃಗ ಸತ್ತಿದ್ದು ಸಹಜವಾಗಿ: ಸಲ್ಮಾನ್ ಸಮರ್ಥನೆ P10

ಪಂಜಾಬ್ ವಿಧಾನಸಭೆ ಚುನಾವಣೆ: ಕ್ಯಾಪ್ಟನ್ ಅಮರೀಂದರ್ ಸಿಂಗ್ ಕಾಂಗ್ರೆಸ್‌ನ ಸಿಎಂ ಅಭ್ಯರ್ಥಿ ಎಂದು ಪಕ್ಷದ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರಿಂದ ಅಧಿಕೃತ ಘೋಷಣೆ P10

ಆಸ್ಟ್ರೇಲಿಯಾ ಓಪನ್: ಮಿಶ್ರ ಡಬಲ್ಸ್ ಫೈನಲ್ಸ್‌ಗೆ ಸಾನಿಯಾ-ದೋಡಿಗ್ P12

## 'ವಿದ್ಯಾರ್ಥಿಗಳು ಏರೋನಾಟಿಕ್ಸ್ ಕ್ಷೇತ್ರದಲ್ಲಿ ತೊಡಗಿಸಿ'

■ **ವಿಕ ಸುದ್ದಿಲೋಕ** ಮಂಗಳೂರು

ಏರೋನಾಟಿಕ್ಸ್ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಕ್ಷೇತ್ರ. ಆದರೆ ದೇಶದಲ್ಲಿ ಇದರ ಕುರಿತು ಹೆಚ್ಚಿನ ಜಾಗೃತಿ, ಮಾಹಿತಿಯ ಕೊರತೆಗಳು ಕಾಣಿಸಿಕೊಂಡಿದೆ. ವಿದ್ಯಾರ್ಥಿಗಳು ಜಾಸ್ತಿ ಮುತುವರ್ಜಿ ವಹಿಸಿಕೊಂಡರೆ ಇದೆಲ್ಲವೂ ಬಗೆಹರಿಯುತ್ತದೆ. ಇಂತಹ ಏರೋ ನಾಟಿಕ್ಸ್ ಸ್ಪರ್ಧೆಗಳು ವಿದ್ಯಾರ್ಥಿಗಳೇ ಆಯೋಜನೆ ಮಾಡುತ್ತಿರುವುದು ಶ್ಲಾಘನೀಯ ವಿಚಾರ ಎಂದು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ದೇಶಕ ಜೆ.ಟಿ. ರಾಧಾಕೃಷ್ಣ ಹೇಳಿದರು.

ಅವರು ಶುಕ್ರವಾರ ನಗರದ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಆಡಳಿತಾತ್ಮಕ ಕಾಲೇಜು ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಹಮ್ಮಿಕೊಂಡ ಎರಡು ದಿನಗಳ ರಾಷ್ಟ್ರಮಟ್ಟದ ಏರೋಫಿಲಿಯಾ ಏರೋ ಮಾದರಿ ಸ್ಪರ್ಧೆ ಹಾಗೂ ಏರ್ ಶೋಗೆ ಚಾಲನೆ ನೀಡಿ ಮಾತನಾಡಿದರು.



ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಹಮ್ಮಿಕೊಂಡ ಎರಡು ದಿನಗಳ ರಾಷ್ಟ್ರಮಟ್ಟದ ಏರೋಫಿಲಿಯಾ ಏರೋ ಮಾದರಿ ಸ್ಪರ್ಧೆ ಹಾಗೂ ಏರ್ ಶೋಗೆ ಚಾಲನೆ ಜೆ.ಟಿ. ರಾಧಾಕೃಷ್ಣ ನೀಡಿದರು.

ಸಹ್ಯಾದ್ರಿ ಶಿಕ್ಷಣಸಂಸ್ಥೆಗಳ ಚೇರ್‌ಮನ್ ಮಂಜುನಾಥ ಭಂಡಾರಿ, ಫ್ಲೈಟ್ ಲೆಫ್ಟಿನೆಂಟ್ ಪ್ರೊ. ಬಿ.ಆರ್. ಕುಲಕರ್ಣಿ, ಬಿ.ಎ.ಆರ್.ಸಿ ವಿಜ್ಞಾನಿ ಪ್ರೊ.ಬಿ. ಕರ್ಕೆರಾ, ಮುಂಬಯಿಂ ಐಐಟಿಯ ಎಂಜಿನಿಯರ್ ರಜನೀಕಾಂತ್ ಶಾಸ್ತ್ರಿ,ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮಾಜಿ ನಿರ್ದೇಶಕ ಎಂ.ಆರ್. ವಾಸುದೇವ, ಇಂಡಿಯನ್ ಏರ್‌ಫೋರ್ಸ್‌ನ ವಿಂಗ್ ಕಮಾಂಡರ್ ಪಿ.ಸಿ. ಪ್ಲ್ಯಾಂಟ್, ಇಂಡಿಯನ್ ಏರೋನಾಟಿಕಲ್ ಡೆವಲಪ್ ಮೆಂಟ್ ಏಜೆನ್ಸಿಯ ಎಂಜಿನಿಯರ್ ಪದ್ಮಾವತಿ, ಇಸ್ರೋದ ನಿವೃತ್ತ ಎಂಜಿನಿಯರ್ ಎಂ.ಎಸ್. ಭಟ್ ಮೊದಲಾದವರು ಉಪಸ್ಥಿತರಿದ್ದರು.

### ಗಮನ ಸೆಳೆದ ವಿದ್ಯಾರ್ಥಿಗಳ ಶ್ರಮ

ಸಹ್ಯಾದ್ರಿ ಕಾಲೇಜಿನ ಟೀಮ್ ಚಾಲೆಂಜರ್ಸ್ ಈ ಕಾರ್ಯಕ್ರಮವನ್ನು ಆಯೋಜಿಸಿದೆ. ಇದರಲ್ಲಿರುವ 60 ವಿದ್ಯಾರ್ಥಿಗಳ ಪರಿಶ್ರಮವೇ ಈ ಸ್ಪರ್ಧೆಗೆ ಮೂಲ ಕಾರಣ. ಈ ವಿದ್ಯಾರ್ಥಿಗಳ ತಂಡ ಏರೋನಾಟಿಕ್ಸ್ ಮತ್ತು ರೊಬೊಟಿಕ್ಸ್ ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿ ಪಡೆದಿದ್ದಾರೆ. ಈ ಸ್ಪರ್ಧೆಯಲ್ಲಿ 5 ವಿಭಾಗಗಳಿದ್ದು ಸರಿಸುಮಾರು 300 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಮುಖ್ಯವಾಗಿ ತಿರುವನಂತಪುರ, ಚೆನ್ನೈ, ಬೆಂಗಳೂರು ಮೊದಲಾದ ಕಡೆಯಿಂದ ಸ್ಪರ್ಧಿಗಳು ಭಾಗವಹಿಸಿದ್ದರು. ಏರ್ ಮಾದರಿ ಸ್ಪರ್ಧೆ ಹಾಗೂ ಏರೋ ಶೋನಲ್ಲಿ ಸರಿಸುಮಾರು 30ಕ್ಕೂ ಅಧಿಕ ಸ್ಪರ್ಧಿಗಳು ಭಾಗವಹಿಸಿದ್ದಾರೆ. ಏರೋ ಫಿಲಿಯಾ ಏರ್ ಶೋವನ್ನು ಅಬ್ದುಲ್ಲ ಜಸೀಮ್ ನಿರ್ವಹಣೆ ಶೈಲಿಯಂತೂ ನೆರೆದ ಪ್ರೇಕ್ಷರನ್ನು ಸೆಳೆಯುವಲ್ಲಿ ಯಶಸ್ಸು ಕಂಡಿತ್ತು.

## ಬೆರಗು ಮೂಡಿಸಿದ ಲೋಹ ಹಕ್ಕಿಗಳ ಹಾರಾಟ

■ **ವಿಕ ಸುದ್ದಿಲೋಕ** ಮಂಗಳೂರು

ಒಂದು ಕಡೆಯಿಂದ ಹರಿಯುತ್ತಿರುವ ನೇತ್ರಾವತಿ ನದಿ, ಸುತ್ತಲೂ ಹಚ್ಚ ಹಸುರಿನ ವಾತಾವರಣ. ಸೇರಿದ್ದ ಸಾವಿರಾರು ಯುವಕ- ಯುವತಿಯರ, ಮಕ್ಕಳ ಚಿತ್ತ ಆಗಸದತ್ತ ನೆಟ್ಟಿತ್ತು. ಬಾನಂಗಳದಲ್ಲಿ ಹಾರುತ್ತಿದ್ದ ಲೋಹದ ಹಕ್ಕಿಗಳು ಮೋಡವನ್ನು ಚುಂಬಿಸಲು ಹಾತೊರಿಯುವಂತೆ ಕ್ಷಣ ಕ್ಷಣಕ್ಕೂ ತನ್ನ ವೇಗ ಹೆಚ್ಚಿಸುತ್ತಿದ್ದವು. ಸಣ್ಣ ವಿಮಾನಗಳು ಮೇಲಕ್ಕೆ ಹೋದಂತೆ ವೀಕ್ಷಕರ ಕುತೂಹಲ, ಕರತಾಡನ ಮುಗಿಲು ಮುಟ್ಟಿತ್ತು.







ಈ ದೃಶ್ಯ ಕಂಡು ಬಂದಿದ್ದು ಶುಕ್ರವಾರ ಮಂಗಳೂರಿನ ಸಹ್ಯಾದ್ರಿ ಕಾಲೇಜಿನ ಕ್ಯಾಂಪಸ್‌ನಲ್ಲಿ ನಡೆದ ಏರೋಫಿ ಲಿಯಾ-2017 ಏರ್ ಶೋನಲ್ಲಿ.

ಏರೋ ಮೊಡೆಲಿಂಗ್, ಡ್ರೋನ್ ರೇಸ್, ಏರ್‌ಶೋ , ಟ್ರೆಶರ್ ಹಂಟ್ ಮತ್ತು ಫೋಟೋಗ್ರಫಿ ಸ್ಪರ್ಧೆಗಳಲ್ಲಿ ಸುಮಾರು 300ಕ್ಕೂ ಹೆಚ್ಚಿನ ಕಾಲೇಜು ದೇಶ-ವಿದೇಶದ ಯುವಕ- ಯುವತಿ ಯರು ಮಕ್ಕಳು ಭಾಗವಹಿಸಿದ್ದರು. ಅತಿ ಅಪರೂಪವೆನಿಸುವ ಇಂತಹ ಏರ್ ಶೋ ಸಹ್ಯಾದ್ರಿ ಕ್ಯಾಂಪಸ್ ನಲ್ಲಿ ನಡೆಯುತ್ತಿರುವುದು ಎರಡನೇ ಸಲ.

ಪ್ರತಿಭಾವಂತ ಹೈಸ್ಕೂಲ್ ಮಕ್ಕಳಿಗೆ ಏರೋನಾಟಿಕ್ಸ್ ಶಿಕ್ಷಣದ ಜತೆ ಕೆಲವು ಕಂಪ್ಯೂಟರ್ ಗೇಮ್ ಸ್ಪರ್ಧೆಗಳನ್ನು ಏರ್ಪಡಿಸಿ ಅದಕ್ಕೆ ಬಹುಮಾನ ನೀಡುತ್ತಿರುವುದು ವಿಶೇಷ. ಆಯೋಜಿಸಲಾಗಿದ್ದ ಡ್ರೋನ್ ರೇಸ್‌ನಲ್ಲಿ ಹಲವು ಮಾದರಿಯ ಡ್ರೋನ್‌ಗಳ ಜತೆ ಹೈಸ್ಕೂಲ್ ಮಕ್ಕಳು ಸ್ಪರ್ಧಿಸಿದ್ದು ಈ ಜನಾಂಗದ ಮೇಲೆ ವಿಜ್ಞಾನಕ್ಕಿರುವ ಪ್ರಭಾವವನ್ನು ಸೂಚಿಸುತ್ತಿತ್ತು.

ನಾಸಾದ ಏಮ್ಸ್ ಸಂಶೋಧನಾ ಕೇಂದ್ರ, ದುಬೈ-5 ತಂಡದ , ಬೆಂಗಳೂರು, ಚೆನ್ನೈ, ತಿರುವನಂತಪುರದಿಂದ ವೃತ್ತಿಪರ ಮತ್ತು ಹವ್ಯಾಸಿ ತಂಡಗಳು ಆಗಮಿಸಿದ್ದವು. ಸ್ಪರ್ಧೆ ಮಾತ್ರವಲ್ಲದೇ ತಾವು ತಯಾರಿಸಿದ ವಿಮಾನ ಮಾದರಿಯೊಂದಿಗೆ ಪ್ರದರ್ಶನಕ್ಕೆ ಹಲವಾರು ಹವ್ಯಾಸಿ ಆಸಕ್ತರು ಏರ್ ಶೋನಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಪ್ರದರ್ಶನದ ಸಮಯದಲ್ಲಿ ಕಾರ್ಯಕ್ರಮ ನಿರ್ವಾಹಕರು ಪ್ರತಿಯೊಂದು ಮಾದರಿಯ ಮಾಹಿತಿ, ವಿಫಲ ಪ್ರಯತ್ನಗಳಿಗೆ ಉಪಯುಕ್ತ ಸಲಹೆ ನೀಡುತ್ತಿದ್ದುದು ಆಸಕ್ತರ ಗಮನ ಸೆಳೆಯಿತು.

### ದೇಶ ವಿದೇಶ ತಂಡಗಳ ಪ್ರದರ್ಶನ

ಭಾರತೀಯ ಮೂಲಗಳಿಂದ ಅಲ್ಲದೇ ವಿದೇಶಗಳಿಂದಲೂ ತಂಡಗಳು ಆಗಮಿಸಿದ್ದು ಈ ಪ್ರದರ್ಶನದ ವಿಶೇಷ. ಭಾರತೀಯ ತಂಡಗಳಿಂದ ಪ್ರಮುಖವಾಗಿ ಟ್ಯುಕಾನೋ, ಸ್ಕ್ಯಾನರ್, ಟ್ವಿನ್ ಮೋಟಾರ್ ಕ್ರೂಶರ್ ಮಾದರಿಗಳ ಹಾರಾಟ ಕಂಡುಬಂದರೆ ದುಬೈನಿಂದ ಬಂದಿದ್ದ ತಂಡದಿಂದ ನಿಟ್ರೋ 3ಡಿ, ಜಿಎಲುಬಿ ಎನ್7 ಹೆಲಿಕಾಪ್ಟರ್, ನಿಯಮಿತ ವಿದ್ಯುತ್ ವ್ಯವಸ್ಥೆಯ ರೇಡಿಯೋ ಕಂಟ್ರೋಲ್ಡ್ ಏರ್‌ಕ್ರಾಫ್ಟ್ ಮಾದರಿಗಳ ಪ್ರದರ್ಶನ ನಡೆಯಿತು.

ಮಂಗಳೂರಿನಲ್ಲಿ ಇಂತಹ ಪ್ರದರ್ಶನ ನಡೆಯುದರಿಂದ ಯುವ ಎಂಜಿನಿಯರ್‌ಗಳಿಗೆ ಹೊಸ ಮಾದರಿಗಳ ಬಗ್ಗೆ ತಿಳಿಯಲು ಅವಕಾಶ ಸಿಕ್ಕಾ ಇದೆ. ಆಸಕ್ತರಿಗೆ ಇಲ್ಲಿ ಕಲಿಯಲು ತುಂಬಾ ಇದೆ. ಪ್ರತಿವರ್ಷ ನಡೆಸಿದರೆ ಉತ್ತಮ.

**- ನಂದಗೋಪಾಲ್**, ವಿದ್ಯಾರ್ಥಿ

~ಮುಂಜಾನೆ ಮಾತು ~
ನಗುತ್ತಿರಬೇಕು ನಿಜ.
ಆದರೆ ಯಾರನ್ನೋ
ನೋಡಿ ನಗುವುದಕ್ಕಿಂತ
ಎಲ್ಲರೊಡನೆ ಬೆರೆತು
ನಗುತ್ತ ನಗಿಸುವ ಸುಖ
ಹೆಚ್ಚಿನದು.

# ವಿಜಯವಾಣಿ

ನಂ.1 ಕನ್ನಡ ದಿನಪತ್ರಿಕೆ

ಕನ್ನಡಿಗರ ಧ್ವನಿ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI MANGALURU ಮಂಗಳೂರು ಸಂಪುಟ 5 ಸಂಚಿಕೆ 299

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 28 ಜನವರಿ 2017 | ಶನಿವಾರ



# ಪುಟ್ಟ ವಿಮಾನಗಳ ಕಸರತ್ತು

## ಸಹ್ಯಾದ್ರಿ ಕಾಲೇಜಿನ ಟೀಮ್ ಚಾಲೆಂಜರ್ಸ್ ಆಯೋಜನೆ | ದೇಶ- ವಿದೇಶ ಪ್ರತಿನಿಧಿಗಳು ಭಾಗಿ

**ವಿಜಯವಾಣಿ ಸುದ್ದಿಜಾಲ** ಮಂಗಳೂರು

ನಗರದ ಹೊರ ವಲಯ ಅಡ್ಯಾರ್‌ನ ಸಹ್ಯಾದ್ರಿ ಕಾಲೇಜಿನ ನಿಸರ್ಗ ರಮಣೀಯ ತಾಣದ ನಡುವೆ ಆಗಸದಲ್ಲಿ ಶುಕ್ರವಾರ ಪುಟ್ಟ ವಿಮಾನಗಳ ತಾಲೀಮು ವಿದ್ಯಾರ್ಥಿಗಳು, ಸಾರ್ವಜನಿಕರನ್ನು ಕುತೂಲಹದಿಂದ ವೀಕ್ಷಿಸುವಂತೆ ಮಾಡಿತು.

ಸುತ್ತಲೂ ಹಸಿರು ಬೆಟ್ಟ, ಪಕ್ಕದಲ್ಲೇ ಹರಿಯುವ ನೇತ್ರಾವತಿ, ನಡುವೆ ಹಾವಿನಂತೆ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ ಹೊರತುಪಡಿಸಿದರೆ ಹೆಚ್ಚು ಕಡಿಮೆ ಹಳ್ಳಿ ಪರಿಸರವನ್ನೇ ಹೋಲುವ ಈ ಪ್ರದೇಶದ ಶುಭ್ರ ಆಗಸ ಯುವ ತಂತ್ರಜ್ಞರು ತಮ್ಮ ಮಾದರಿ ವಿಮಾನಗಳ ಕಸರತ್ತು ನಡೆಸಲು ವೇದಿಕೆಯಾಯಿತು. ವಿದ್ಯಾರ್ಥಿಗಳ ಹಲವು ವಿಮಾನಗಳು ಬಾನೆತ್ತರದಲ್ಲಿ ಹಾರುತ್ತಿದ್ದ ಗಿಡುಗನ ಜತೆ ಸ್ಪರ್ಧೆ ಹೂಡಿದವು.

ಇವೆಲ್ಲ ಕಂಡುಬಂದದ್ದು ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಆಡಳಿತಾತ್ಮಕ ಕಾಲೇಜಿನಲ್ಲಿ ಶುಕ್ರವಾರ ಆರಂಭಗೊಂಡ ಎರಡು ದಿನಗಳ ರಾಷ್ಟ್ರೀಯ ಮಟ್ಟದ ಏರೋ ಮಾದರಿ ಸ್ಪರ್ಧೆ ಹಾಗೂ ಏರೋ ಶೋ 'ಏರೋಫಿಲಿಯಾ- 2017'ದಲ್ಲಿ.



ಚಿತ್ರಗಳು: ವಿಜಯವಾಣಿ

ತಿರುವನಂತಪುರದ ಇಂಡಿ ಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ (ಐಐಎಸ್‌ಟಿ), ಸುರತ್ಕಲ್ ಎನ್‌ಐಟಿಕೆ, ಎಐಎಸ್‌ಎಸ್ ಎಂಎಸ್, ಎನ್‌ಎಂಎಎಂ, ಮೌಂಟ್ ಕಾರ್ಮೆಲ್ ಸೆಂಟ್ರಲ್, ಮಂಗಳೂರಿನ ಶ್ರೀ ರಾಮಕೃಷ್ಣ ಕಾಲೇಜು, ಶ್ರೀನಿವಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಿಲಾಗ್ರಿಸ್, ಮಣಿಪಾಲ್ ಸ್ಕೂಲ್ (ಅತ್ತಾವರ) ಮುಂತಾದ ಶಿಕ್ಷಣ ಸಂಸ್ಥೆಗಳ ಸಹಿತ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ 400ಕ್ಕೂ ಅಧಿಕ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದಾರೆ.

ಶುಕ್ರವಾರ ಮುಖ್ಯವಾಗಿ ಏರೋ ಮಾಡೆಲಿಂಗ್, ಡ್ರೋನ್, ಟ್ರೆಷರ್‌ಹಂಟ್, ಪಿಸಿ ಗೇಮ್ಸ್ ಸ್ಪರ್ಧೆಗಳು ನಡೆದವು. ಪ್ರಸಿದ್ಧ ಸಂಪನ್ಮೂಲ ವ್ಯಕ್ತಿಗಳಿಂದ ನಾಸಾ ತಾಂತ್ರಿಕ ಮಾಹಿತಿ, ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ದೇಶಕ ಜಿ.ಟಿ.ರಾಧಾಕೃಷ್ಣ, ಮಾಜಿ ನಿರ್ದೇಶಕ ಎಂ.ಆರ್.ವಾಸುದೇವ, ಇಸ್ರೋ ಮಾಜಿ ವಿಜ್ಞಾನಿ ಡಾ.ಎಂ.ಎಸ್.ಭಟ್, ಸಹ್ಯಾದ್ರಿ ಕಾಲೇಜು ಅಧ್ಯಕ್ಷ ಮಂಜುನಾಥ ಭಂಡಾರಿ ಮುಂತಾದವರ ಮಾರ್ಗದರ್ಶನದ ಬೆಂಬಲ ದೊರೆಯಿತು.



### 3ಡಿ ಹೆಲಿಕಾಪ್ಟರ್

ದುಬೈ ಕಸ್ಟಮ್ಸ್ ಉದ್ಯೋಗಿ ಅಬ್ದುಲ್ಲಾಹ್ ಫುಹೀಮ್ ಮಾದರಿ ವಿಮಾನಗಳ ಪ್ರದರ್ಶನಕ್ಕಾಗಿಯೇ ಭಾರತಕ್ಕೆ ಆಗಮಿಸಿದ್ದಾರೆ. ನಾಸಾ ಏಮ್ಸ್ ಸಂಶೋಧನಾ ಕೇಂದ್ರದ ಡಾ.ಪರಿಮಳ್ ಕೋಪಾಡ್ಕರ್, ಭಾರತ-ದುಬೈನ ಟೀಮ್-5 ವೃತ್ತಪರ ತಂಡದ 3ಡಿ ಹೆಲಿಕಾಪ್ಟರ್ ಪ್ರದರ್ಶನ ವೀಕ್ಷಕರಿಗೆ ಹೆಚ್ಚಿನ ಹುರುಪು ತುಂಬಿತು.

### ಏಕಾಗ್ರತೆ, ಸ್ಥಿರತೆ ಅಗತ್ಯ

ವೈಮಾನಿಕ ಕ್ಷೇತ್ರದಲ್ಲಿ ದುಡಿಯುವವರು ಏಕಾಗ್ರತೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದು ಅವಶ್ಯ. ಬದುಕಿನಲ್ಲಿ ನಿರಂತರ ಸವಾಲು ಎದುರಿಸುವ ಛಲ ಬೆಳೆಸಿಕೊಂಡವರಿಗೆ ಈ ಕ್ಷೇತ್ರ ಅಪ್ಯಾಯಮಾನವಾಗಿ ಗೋಚರಿಸುತ್ತದೆ. ವೈಮಾನಿಕ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವಿದ್ದು, ಈ ವಿಷಯದಲ್ಲಿ ಕಲಿಕೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ಈ ಸವಾಲು ಸ್ವೀಕರಿಸಬೇಕು ಎಂದು 'ಏರೋಫಿಲಿಯಾ-2017' ಉದ್ಘಾಟಿಸಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ದೇಶಕ ಡಾ.ಜಿ.ಟಿ.ರಾಧಾಕೃಷ್ಣನ್ ತಿಳಿಸಿದರು. ಇಂಟೆಲ್‌ನ ಮಾಜಿ ವ್ಯವಸ್ಥಾಪಕ ರಜನಿಕಾಂತ್ ಶಾಸ್ತ್ರಿ, ಬಿಎಆರ್‌ಸಿ ವಿಜ್ಞಾನಿ ಪ್ರೊ.ಬಿ.ಎನ್.ಕರ್ಕೇರ, ಇಂಡಿಯನ್ ಏರ್ ಫೋರ್ಸ್ ವಿಂಗ್ ಕಮಾಂಡರ್ ಪಿ.ಸಿ. ಪ್ಯಾಂಟ್, ಇಂಡಿಯನ್ ಏರೋನಾಟಿಕಲ್ ಡೆವಲಪ್ ಮೆಂಟ್ ಏಜೆನ್ಸಿ ವಿಜ್ಞಾನಿ ಪದ್ಮಾವತಿ, ದುಬೈ ಕಸ್ಟಮ್ ಉದ್ಯೋಗಿ ಅಬ್ದುಲ್ಲಾಹ್ ಫುಹೀಮ್ ಸಲೆಹನೆಜ್ಹಾದ್ ಮೊರಫಿ, ದುಬೈ ಪೊಲೀಸ್ ಉದ್ಯೋಗಿ ಎಸ್ಸಾ ಸಹೀದ್ ಎಸ್ಸಾ ಬಿನಾಯ್‌ನೊಫ್ ಉಪಸ್ಥಿತರಿದ್ದರು. ಸಹ್ಯಾದ್ರಿ ಶಿಕ್ಷಣ ಸಮೂಹ ಸಂಸ್ಥೆಯ ಟ್ರಸ್ಟಿ ದೇವದಾಸ್ ಹೆಗ್ಡೆ, ಪ್ರಾಂಶುಪಾಲ ಉಮೇಶ್‌ಎನ್. ಭೂಷಿ ಉಪಸ್ಥಿತರಿದ್ದರು.



BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM | MANGALURU | SATURDAY, JANUARY 28, 2017 | PAGES 20 | PRICE ₹5

THE TIMES OF INDIA

INCLUDES 4 PAGES OF *MANGALORE TIMES (*FOR MANGALURU, MANIPAL AND UDUPI CITY AREAS ONLY)



SALMAN RECORDS STATEMENT IN BLACKBUCK POACHING CASE, PLEADS INNOCENCE 6

INDIA BECOMING ONE OF MOST TRANSPARENT, OPEN ECONOMIES: JAITLEY 6



BIOCON CHIEF DEFENDS VIJAY MALLYA, SAYS 'DON'T VILIFY FAILURE' 13

# RC aircraft set the sky abuzz in city

TIMES NEWS NETWORK



TOI

**HIGH FLYING:** Flyers from Dubai Abdullah Jaseem and Essa Saeed Essa Binaynouh with one of their planes that runs on fuel. The two day national level aeromodelling competition began in Mangaluru on Friday

**Mangaluru:** The sultry weather in the city notwithstanding, students and aviation enthusiasts turned up in hundreds at the Sahyadri College of Engineering and Management, which is hosting the two-day national-level aeromodelling competition 'Aerophilia 2017', the curtains on which rose on Friday.

The sky buzzed with the humming of the radio-controlled (RC) aircraft and helicopters, and the crowd was treated to a host of manoeuvres that left them beguiled. Planes that ran on fuel brought by two flyers from Dubai — Abdullah Jaseem, manager for health and environment in port and customs, and Essa, a cop — were added attractions at what was an avionic fete, with the atmosphere resembling that of an air show. Their planes were called NX7 Gaui.

Members of the Mangalore Flyers Club were among the showstealers at the event, with their RC aeroplanes dazzling the crowd with spectacular feats. As many as 30 teams from across the country, including teams from NITs and IITs, have descended on Mangaluru to participate in the event. The competition will entail the participants having to design the aircraft, which will be judged on the quality of their design and working capacity.

Some of the models that were on show on the inaugural day of Aerophilia 2017 included Ticarno, Adarsh-Helicam, besides other jet aircraft. Among other objectives, the event is aimed at encouraging students and youngsters to explore the possibilities in the field of aeronautics.

A Drone Race is among the highlights of the event. According to the organizers, such a contest is being held in the country for the first time. A first year engineering student at the college, Sumanth said, "The race involves two rounds: In the first, the speed of the RC aircraft will be tested, as the drone will have to reach the finishing line as quickly as possible, while in the second, it will gave to perform manoeuvres inside the arena."

The event was organized by Team Challengers, a group of students in Sahyadri College of Engineering and Management, who are very passionate about aeronautics and robotics.

Students who participated in the SAE International Aero Design Competition 2016 hosted at Fort Worth in Texas, USA, and other aero-modelling competitions were part of the organizing committee.

TO ADVERTISE
ON THIS SPACE
CONTACT :
80888 93085
99162 43895
RAINBOW ADS
Advertising Consultants
KOPPIKAR ROAD, HUBLI.

▪ ಮಂಗಳೂರು ▪ ಹುಬ್ಬಳ್ಳಿ ▪ ಕಲಬುರಗಿ ▪ ಬೆಂಗಳೂರು ▪ ದಾವಣಗೆರೆ

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು


▪ ಸಂಪುಟ 59 ▪ ಸಂಚಿಕೆ 3 | ಶನಿವಾರ, 28, ಜನವರಿ, 2017 | ಪುಟ 12+12 | ರೂ. 4-00

CENTRAL LIBRARY



# ‘ಏರೋಫಿಲಿಯಾ-2017’ ಸ್ಪರ್ಧೆಗೆ ಚಾಲನೆ

**ಮಂಗಳೂರು:** ಏರೋನಾಟಿಕ್ಸ್ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ತಾವು ತಯಾರಿಸಿದ ವಿಮಾನ ಮಾದರಿಗಳನ್ನು ಪ್ರದರ್ಶಿಸಲು ಸಹಕಾರಿಯಾಗುವಂತೆ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಆಡಳಿತಾತ್ಮಕ ಕಾಲೇಜು ಏರ್ಪಡಿಸಿರುವ ಎರಡು ದಿನಗಳ ಏರೋ ಮಾದರಿ ರಾಷ್ಟ್ರಮಟ್ಟದ ಸ್ಪರ್ಧೆ ‘ಏರೋಫಿಲಿಯಾ-2017’ ಶುಕ್ರವಾರ ಆರಂಭಗೊಂಡಿತು.



‘ಏರೋಫಿಲಿಯಾ– 2017’ಗೆ ಚಾಲನೆ ನೀಡಲಾಯಿತು.

ಫ್ಲೈಟ್ ಲೆಫ್ಟಿನೆಂಟ್ ಪ್ರೊಫೆಸರ್ ಪ್ರೊ.ಬಿ.ಆರ್.ಕುಲಕರ್ಣಿ, ಇಂಟೆಲ್‌ನ ಮಾಜಿ ವ್ಯವಸ್ಥಾಪಕ ಎಂಜಿನಿಯರ್ ರಜನೀಕಾಂತ್ ಶಾಸ್ತ್ರೀ, ಬಿ.ಎ.ಆರ್.ಸಿ ವಿಜ್ಞಾನಿ, ಪ್ರಸ್ತುತ ಸಹ್ಯಾದ್ರಿಯ ಕೆಜಿಆರ್‌ಸಿಎಸ್‌ನ ನಿರ್ದೇಶಕ ಪ್ರೊ.ಬಿ.ಎನ್.ಕರ್ಕೆರಾ, ಇಸ್ರೋ ವಿಜ್ಞಾನಿ, ಎಂಜಿನಿಯರ್ ಸಿ.ಜೆ.ಜಗದೀಶ, ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮಾಜಿ ನಿರ್ದೇಶಕ ಎಂ.ಆರ್.ವಾಸುದೇವ, ಹಾಲಿ ನಿರ್ದೇಶಕ ಜೆ.ಟಿ.ರಾಧಾಕೃಷ್ಣ, ಇಂಡಿಯನ್ ಏರ್ ಫೋರ್ಸ್ ವಿಂಗ್ ಕಮ್ಯಾಂಡರ್ ಪಿ.ಸಿ.ಪಂಥ್, ಇಂಡಿಯನ್ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯ ಎಂಜಿನಿಯರ್ ಪದ್ಮಾವತಿ, ದುಬೈ ಕಸ್ಟಮ್‌ನ ಉದ್ಯೋಗಿ ಅಬ್ದುಲ್ಲಾಹ್ ಫಹೀಮ್ ಸಲೆಹನೆಜ್ಹಾದ್ ಮೊರಫಿ, ದುಬೈ ಪೊಲೀಸ್‌ನಲ್ಲಿ ಉದ್ಯೋಗಿ ಎಸ್ಸಾ ಸಹೀದ್ ಎಸ್ಸಾ ಬಿನಾಯ್‌ನೊಫ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಏರೋಫಿಲಿಯಾ-2017 ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು 1.45.000 ರೂ.ವರೆಗೂ ಬಹುಮಾನ ಪಡೆಯಲಿದ್ದಾರೆ. ಪ್ರಥಮ ಡ್ರೋನ್ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, 50 ಸಾವಿರ ರೂ.ಗಳಷ್ಟು ನಗದು ಬಹುಮಾನ ವಿಜೇತರಿಗೆ ಸಿಗಲಿದೆ. ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ರೇಡಿಯೊ ಕಂಟ್ರೋಲ್ಡ್ ಏರ್ ಕ್ರಾಫ್ಟ್ ಮಾದರಿಯನ್ನು ವಿನ್ಯಾಸವನ್ನು ನಿರೀಕ್ಷಿಸಿದ್ದು, ಒಂದು ನಿಯಮಿತ ವಿದ್ಯುತ್ ವ್ಯವಸ್ಥೆಯಲ್ಲಿ, ಏರೋಕ್ರಾಫ್ಟ್ ಹೊತ್ತೊಯ್ಯುವ ಸಾಮರ್ಥ್ಯವನ್ನು ಪರೀಕ್ಷಿಸಲಾಗುವುದು.

ನಾಸಾ ಏಮ್ಸ್ ಸಂಶೋಧನಾ ಕೇಂದ್ರದ ಡಾ.ಪರಿಮಳ್ ಕೊಪಾರ್ಡ್ಕರ್ ಅವರ ಪ್ರದರ್ಶನ, ಭಾರತ ಮತ್ತು ದುಬೈನ ಟೀಮ್ -5ರ ವೃತ್ತಿಪರ ತಂಡದಿಂದ 3ಡಿ ಹೆಲಿಕಾಪ್ಟರ್ ಏರ್ ಶೋ, ಡಿಆರ್ಡಿಒ, ಏರ್‌ಫೋರ್ಸ್ ಇಸ್ರೋ ಹಾಗೂ ಐಐಎಸ್ಸಿಗಳ ತಂಡ, ಏರೊ ಮಾಡೆಲಿಂಗ್, ಡ್ರೋಣ್ ಸ್ಪರ್ಧೆ ಹಾಗೂ ಇತರೆ ಸ್ಪರ್ಧೆಗಳು ನಡೆಯುತ್ತಿದೆ.

ವಿಮಾನ ಮಾದರಿಗಳ ಸ್ಪರ್ಧೆ


ಸಹ್ಯಾದ್ರಿ ಕಾಲೇಜಿನ ಟೀಮ್ ಚಾಲೆಂಜರ್ಸ್ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ವಿದ್ಯಾರ್ಥಿಗಳ ತಂಡ ಏರೋನಾಟಿಕ್ಸ್ ಮತ್ತು ರೊಬೊಟಿಕ್ ಕ್ಷೇತ್ರದಲ್ಲಿ ಪರಿಣತಿ ಪಡೆದಿದ್ದಾರೆ. 2016ರಲ್ಲಿ ನಡೆದ ಅಮೆರಿಕಾದ ಟೆಕ್ಸಾಸ್‌ನಲ್ಲಿ ನಡೆದ ಎಸ್‌ಎಇ ಅಂತಾರಾಷ್ಟ್ರೀಯ ಏರೋ ಡಿಸೈನ್ ಸ್ಪರ್ಧೆಯಲ್ಲಿ ಭಾಗವಹಿದ್ದರು. ಅಲ್ಲದೇ ಬೋಯಿಂಗ್ ವಿಮಾನ ಮಾದರಿಗಳ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.


ಏರೊಫಿಲಿಯಾ ಏರ್ ಶೋವನ್ನು ಅಬ್ದುಲ್ಲಾ ಜಸೀಮ್ ನಿರ್ವಹಿಸಿದರು. ಏರ್ ಶೋ ಗಣಿತ, ಇತಿಹಾಸ, ಕಲೆ, ವಿನ್ಯಾಸ ಹಾಗೂ ವಿಜ್ಞಾನದಲ್ಲಿ ವೈವಿಧ್ಯಮಯ ಅನುಭವವನ್ನು ನೀಡಲಿದೆ. ಇದಲ್ಲದೇ ಜ.28 ರಂದು ಮಧ್ಯಾಹ್ನ 3.30 ರಿಂದ ಗಾಳಿಪಟ ಸ್ಪರ್ಧೆ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆಯಲಿದೆ.

THE NEW INDIAN EXPRESS

BENGALURU • SATURDAY • JANUARY 28, 2017 • ₹5.00 • PAGES 16 • MANGALURU EDITION

Sahyadri College of Engineering & Management CENTRAL LIBRARY Adyar, Mangalore





*NADAL WINDS BACK CLOCK TO SET UP DREAM FINAL*

**Spaniard digs deep for 6-3, 5-7, 7-6, 6-7, 6-4 win against Bulgarian Dimitrov. Faces Swiss ace Federer on Sunday**

BIGGEST STAGE **THREE MONTHS ON**

It was on October 19 when Federer, still recovering after shutting down his season early, met Nadal at the opening of the latter's academy in Mallorca. Even then, it seemed unthinkable that two of the sport's most loved players would contest in a Major final three months down the line

**NADAL V FEDERER: REBIRTH**

- One of tennis' most storied rivalries will witness the 35th installment at the Rod Laver Arena. Nadal leads 23-11
- This is their first meeting in a Major final since 2011 in Paris
- On Saturday, Venus Williams will face younger sibling Serena in the women's final. It will be their 15th meeting at a Major

CHENNAI • MADURAI • VIJAYAWADA • BENGALURU • KOCHI • HYDERABAD • VISAKHAPATNAM • COIMBATORE • KOZHIKODE • THIRUVANANTHAPURAM • BELAGAVI • BHUBANESWAR • SHIVAMOGGA • TIRUCHY


# YOUNG ENGINEERS HOOKED TO AEROMODELLING

**EXPRESS NEWS SERVICE**
@Mangaluru

SAHYADRI College of Engineering and Management has organised a two-day national-level Aeromodelling competition 'Aerophilia 2017' at its campus from January 27. As many as 400 students from different schools and colleges from different states participated in the Aeromodelling, airshow, drone race and many other competitions.

Mangaluru International Airport Director J T Radhakrishna who formally inaugurating the programme asked the students be passionate about Aeronautics and Robotics. "Usually students do not give much importance to Aeronautics and Robotics as they require lot of patience and high concentration during the initial period of study. However, students should cultivate interest on these topics as it is an interesting and challenging subject," he said.

The airshow performed by Abdullah Ghasem Salehnezhad Morafi, an employee at Dubai Customs provided a multitude of learning experiences in mathematics, history, arts, graphics and science. The event also attracted the nation's aero modelling enthusiasts to the city. Apart from aeromodelling, 'drone race' held at the campus enthralled the audience. Technical talks were also delivered by chief guests at the programme on the importance of RC modelling, the various career paths available and the importance of aero modelling in the development of the nation.





Airshow performed by different students in different schools and colleges at 'AEROPHILIA 2017'

Prof B R Kulkarni, A flight lieutenant professor who is currently working in Goa Engineering College; Software Solution Provider for FAB Labs in USA Rajanikanth Shastri; ISRO Scientist C J Jagadeesha; Wing Commander from Indian Airforce P C Pant; BARC scientist Prof B N Karkera; Bhandary Foundation Chairman Manjunath Bhandary among others were present.

ಮಂ ಗ ಳೂ ರು MANGALURU ಶನಿವಾರ, 28 ಜನವರಿ 2017 REG.No.MNG / 121 / 2015-17 Posted at kodialbail P.O / RNI:29813/78/ Daily ಸಂಪುಟ 38 | ಸಂಚಿಕೆ 292 | ಪುಟ 14



**ಕಾಂಗ್ರೆಸ್ ಎಂಬುದೀಗ ನಿನ್ನೆಯ ಸುದ್ದಿ: ಚುನಾವಣಾ ಪ್ರಚಾರದಲ್ಲಿ ಮೋದಿ ಲೇವಡಿ** » ಪುಟ 5



**ಆರ್.ಕೆ.ದತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ** » ಪುಟ 4

**ಗೋಯಾತ್ರೆ ಪುರ ಪ್ರವೇಶ**

ಮಂಗಳೂರಿನ ಕೂಳೂರು ಬಳಿಯ ಮಂಗಲಭೂಮಿಯಲ್ಲಿ ಶುಕ್ರವಾರ ಗೋಮಂಗಲ ಯಾತ್ರೆಯ ರಥಗಳಿಗೆ ಭವ್ಯ ಸ್ವಾಗತ ನೀಡಿ ಗೋಧ್ವಜ ಸ್ವೀಕರಿಸುವ ಮೂಲಕ 3ದಿನಗಳ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ಲಭಿಸಿತು.




# ಹೊಸ ದಿಗಂತ

Bengaluru, Mangaluru, Shivamogga, Hubballi epaper www.hosadigantha.in email diganthamlr@gmail.com ಬೆಂಗಳೂರು- ಮಂಗಳೂರು


ಏರೋಫಿಲಿಯಾ2017 ಸ್ಪರ್ಧೆಗೆ ಚಾಲನೆ

## ರೆಕ್ಕೆ ಬಿಚ್ಚಿ ಹಾರಾಡಿದ ಮಾದರಿ ವಿಮಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರತಿ ಕ್ಷಣವೂ ರೋಮಾಂಚನಕಾರಿ ಸನ್ನಿವೇಶ, ರೆಕ್ಕೆ ಬಿಚ್ಚಿ ಬಾನ್ ಎತ್ತರಕ್ಕೆ ರುಮ್ಮ ಎಂದು ಸದ್ದು ಮಾಡುವ ಮಾದರಿ ವಿಮಾನ ಹಾರಾಟವೂ ನೆರೆದಿದ್ದ ಜನರಲ್ಲಿ ಮೈನವಿರೇಳಿಸುವ ದೃಶ್ಯಗಳನ್ನು ಉಂಟು ಮಾಡಿತ್ತು.

ಇದು ನಡೆದುದು ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ. ಏರೋನಾಟಿಕ್ಸ್ ಕ್ಷೇತ್ರದಲ್ಲಿ ವಿಶಿಷ್ಟ ಅಭಿವೃದ್ಧಿ ಸಾಧನೆ ಮಾಡುವ ಉದ್ದೇಶದಿಂದ ಸಹ್ಯಾದ್ರಿ ಕಾಲೇಜಿನ ಟೀಮ್ ಚಾಲೆಂಜರ್ಸ್ ಹಮ್ಮಿಕೊಂಡಿರುವ ಏರೋಫಿಲಿಯಾ-2017 ವಾರ್ಷಿಕ ಸ್ಪರ್ಧೆಯ ಅಂಗವಾಗಿ ಶುಕ್ರವಾರದಿಂದ ಆರಂಭವಾಗಿರುವ ರಾಷ್ಟ್ರಮಟ್ಟದ ಏರೋ ಮಾದರಿ ಸ್ಪರ್ಧೆಗೆ ಚಾಲನೆ ನೀಡಲಾಯಿತು.

ವಿದ್ಯಾರ್ಥಿಗಳು ತಾವು ತಯಾರಿಸಿದ ವಿಮಾನ ಮಾದರಿಗಳನ್ನು ಪ್ರದರ್ಶಿಸುವುದಕ್ಕೆ ಇಂತಹ ವೇದಿಕೆಯು ಸಹ್ಯಾದ್ರಿ ಕಾಲೇಜಿನಲ್ಲಿ ನಿರ್ಮಾಣವಾಗಿದ್ದು, ಸುಮಾರು 30ಕ್ಕೂ ಹೆಚ್ಚು ಏರೋ ಮಾದರಿಗಳ ಹಾರಾಟವೂ ಯಶಸ್ವಿಯಾಗಿ ನಡೆಯಿತು. ಬೆಂಗಳೂರು, ಪುತ್ತೂರು, ಕಾಸರಗೋಡು, ತಿರುವನಂತಪುರ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ದುಬೈ ಕಸ್ಟಮ್ಸ್ ಉದ್ಯೋಗಿ ಅಬ್ದುಲ್ಲಾಹ್ ಘಹೀಮ್ ಸಲೆಹನೆಜ್ಜಾದ್ ಮೊರಫಿ ಹಾಗೂ ದುಬೈನಲ್ಲಿ ಪೊಲೀಸ್ ಇಲಾಖೆಯಲ್ಲಿ ಉದ್ಯೋಗಿ ಆಗಿರುವ ಎಸ್ಸಾ ಸಹೀದ್ ಎಸ್ಸಾ ಬಿನಾಯ್ನೊಫ್ ಪ್ರದರ್ಶನ ನೀಡಿದರು.



ಏರೋ ಮಾದರಿ ಶೋನಲ್ಲಿ ಮಾದರಿ ವಿಮಾನದ ಸಿದ್ಧತೆ. **ಪ್ರಜಾವಾಣಿ ಚಿತ್ರ**

ಎಬಿಎಸ್ಎಸ್ಎಂಎಸ್ ವಿದ್ಯಾರ್ಥಿ ವೈಭವ ವಿ. ನಾಯಕ ಹಾಗೂ ಐಐಎಸ್‌ಟಿ ತಿರುವನಂತಪುರದಲ್ಲಿ ಓದುತ್ತಿರುವ ಅರುಣ್ ನ್ಯಾಮಗೌಡರ್ ಅವರ ತಂಡವು ಬ್ಯಾಟರಿ ಚಾಲಿತ ಮಾದರಿ ವಿಮಾನಗಳನ್ನು ಆಕಾಶದತ್ತ ಹಾರಿಸುವ ಮೂಲಕ ಏರ್ ಶೋನಲ್ಲಿ ಎಲ್ಲರ ಗಮನ ಸೆಳೆದರು. ಬೆಂಗಳೂರಿನ ಏರ್ ಟ್ರಿಕ್ಸ್ ಏರೋಪ್ಲೆನ್ ತಂಡವು ಸುಮಾರು 10ಕ್ಕೂ ಹೆಚ್ಚು ಪೆಟ್ರೋಲ್ ಚಾಲಿತ ಹೆಲಿಕಾಪ್ಟರ್, ಜೆಟ್, ಏರ್‌ಕ್ರಾಫ್ಟ್ ಮಾದರಿಗಳು ರೆಕ್ಕೆ ಬಿಚ್ಚಿ ಹಾರಾಟ ನಡೆಸಿದ್ದವು. ಆದರೆ ಇವುಗಳ ಕಾರ್ಯವನ್ನು ರಿಮೋಟ್ ಮೂಲಕವೇ ನಿಯಂತ್ರಣ ಮಾಡಲಾಗುತ್ತಿತ್ತು.

'ಇದು ನನ್ನ ಮೊದಲ ಏರ ಶೋ ಪ್ರದರ್ಶನ, ತಿರುವನಂತಪುರ ಐಐಎಸ್‌ಟಿ ಕಾಲೇಜನ್ನು ಇಸ್ರೋದಲ್ಲಿ ಸೇರ್ಪಡೆ ಮಾಡುವ ಉದ್ದೇಶದಿಂದ ಈ ಶೋದಲ್ಲಿ ಪಾಲ್ಗೊಂಡಿದ್ದು, ಈ ಮಾದರಿಯನ್ನು ನಾಲ್ಕು ಜನರ ನಮ್ಮ ತಂಡವು ತಯಾರು ಮಾಡಿದ್ದು, ಏರೋನಾಟಿಕ್ಸ್ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡುವುದು ನಮ್ಮ ಹಂಬಲ' ಎಂದು ಬಿಇ ಏರೋ ಸ್ಪೇಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿ ಅರುಣ್ ನ್ಯಾಮಗೌಡರ್ ತಿಳಿಸಿದರು.

ಇನ್ನು ಡ್ರೋಣ್ ರೇಸ್ ಸ್ಪರ್ಧೆಯೂ ನಡೆದಿತ್ತು. 28ಕ್ಕೂ ಹೆಚ್ಚು ವಿದ್ಯಾರ್ಥಿಗಳು ಡ್ರೋಣ್ ರೇಸ್ ಶೋನಲ್ಲಿ ಪಾಲ್ಗೊಂಡಿದ್ದರು. ಪ್ರೌಢಶಾಲಾ ವಿದ್ಯಾರ್ಥಿಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲುದಾರಿಕೆ ಪಡೆದಿದ್ದರು. ಗಣಿತ, ಇತಿಹಾಸ, ಕಲೆ ವಿನ್ಯಾಸ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಸ್ಪರ್ಧೆ ಗಳು ನಡೆದವು.

ಫ್ಲೈಟ್ ಲೆಫ್ಟಿನೆಂಟ್ ಪ್ರೊ. ಬಿ. ಆರ್. ಕುಲಕರ್ಣಿ, ಎಂಜಿನಿಯರ್ ರಜನಿಕಾಂತ್ ಶಾಸ್ತ್ರಿ, ಪ್ರೊ. ಬಿ.ಎನ್. ಕರ್ಕೇರಾ, ಎಂ.ಆರ್. ವಾಸುದೇವ್, ಇಸ್ರೋ ಮಾಜಿ ವಿಜ್ಞಾನಿ ಎಂ.ಎಸ್. ಭಟ್, ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ದೇಶಕ ಜೆ.ಟಿ. ರಾಧಾಕೃಷ್ಣ, ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಮುಖ್ಯಸ್ಥ ಮಂಜುನಾಥ ಭಂಡಾರಿ ಇದ್ದರು.

ಮಂಗಳೂರು MANGALURU ಶನಿವಾರ, 28 ಜನವರಿ 2017 REG.No.MNG / 121 / 2015-17 Posted at kodialbail P.O / RNI:29813/78/ Daily ಸಂಪುಟ 38 । ಸಂಚಿಕೆ 292 । ಪುಟ 14



**ಕಾಂಗ್ರೆಸ್ ಎಂಬುದೀಗ ನಿನ್ನೆಯ ಸುದ್ದಿ: ಚುನಾವಣಾ ಪ್ರಚಾರದಲ್ಲಿ ಮೋದಿ ಲೇವಡಿ** >>> ಪುಟ 5



**ಆರ್.ಕೆ.ದತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ** >>> ಪುಟ 4

**ಗೋಯಾತ್ರೆ ಪುರ ಪ್ರವೇಶ**

ಮಂಗಳೂರಿನ ಕೂಳೂರು ಬಳಿಯ ಮಂಗಲಭೂಮಿಯಲ್ಲಿ ಶುಕ್ರವಾರ ಗೋಮಂಗಲ ಯಾತ್ರೆಯ ರಥಗಳಿಗೆ ಭವ್ಯ ಸ್ವಾಗತ ನೀಡಿ ಗೋಧ್ವಜ ಸ್ವೀಕರಿಸುವ ಮೂಲಕ 3ದಿನಗಳ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ಲಭಿಸಿತು.




# ಹೊಸ ದಿಗಂತ

ರಾಷ್ಟ್ರಜಾಗೃತಿಯ ಧ್ವನಿ

Bengaluru, Mangaluru, Shivamogga, Hubballi epaper www.hosadigantha.in email diganthamlr@gmail.com ಬೆಂಗಳೂರು- ಮಂಗಳೂರು


## ಏರೋಫಿಲಿಯಾ



ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಆಡಳಿತಾತ್ಮಕ ಕಾಲೇಜು ವತಿಯಿಂದ ಏರೋನಾಟಿಕ್ಸ್ ಕ್ಷೇತ್ರದಲ್ಲಿ ವಿಶಾಲ ದೃಷ್ಟಿಕೋನದಿಂದ ಎರಡು ದಿನಗಳ ಏರೋ ಮಾದರಿ ರಾಷ್ಟ್ರಮಟ್ಟದ ಸ್ಪರ್ಧೆಯನ್ನು ಆಯೋಜಿಸಿದ್ದು ಶುಕ್ರವಾರ ಆರಂಭಗೊಂಡಿತು.

ಶನಿವಾರ, ಜನವರಿ 28, 2017 | ಮಂಗಳೂರು | ₹ 5.00 | ಪುಟ 20 | ಸಂಪುಟ 20 | ಸಂಚಿಕೆ 28

goo.gl/S62nF1 f/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**
ಏಕಾಂಗಿ ಹೆಣ್ಣಿಗೆ ಪ್ರವಾಸ ಗಗನಕುಸುಮವೇ!

ನನಗೆ ದುಡ್ಡಿನ ಕಾಯಿಲೆ ಇಲ್ಲ: ವಿಶ್ವನಾಥ ಶೆಟ್ಟಿ 5

**ನಾಳೆ ಮಹಾತ್ರಿವೇಣಿ ಸಂಗಮ** 4



| ಸೆನ್ಸೆಕ್ಸ್ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|
| 27,882 | ₹29,106 (ಬೆಂಗಳೂರು) | ₹41,200 (ಬೆಂಗಳೂರು) | 68.03 |

ಏರೋಫಿಲಿಯಾ2017 ಸ್ಪರ್ಧೆಗೆ ಚಾಲನೆ

## ರೆಕ್ಕೆ ಬಿಚ್ಚಿ ಹಾರಾಡಿದ ಮಾದರಿ ವಿಮಾನ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಪ್ರತಿ ಕ್ಷಣವೂ ರೋಮಾಂಚನಕಾರಿ ಸನ್ನಿವೇಶ, ರೆಕ್ಕೆ ಬಿಚ್ಚಿ ಬಾನ್ ಎತ್ತರಕ್ಕೆ ರುಮ್ಮ ಎಂದು ಸದ್ದು ಮಾಡುವ ಮಾದರಿ ವಿಮಾನ ಹಾರಾಟವೂ ನೆರೆದಿದ್ದ ಜನರಲ್ಲಿ ಮೈನವಿರೇಳಿಸುವ ದೃಶ್ಯಗಳನ್ನು ಉಂಟು ಮಾಡಿತ್ತು.

ಇದು ನಡೆದುದು ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ. ಏರೋನಾಟಿಕ್ಸ್ ಕ್ಷೇತ್ರದಲ್ಲಿ ವಿಶಿಷ್ಟ ಅಭಿವೃದ್ಧಿ ಸಾಧನೆ ಮಾಡುವ ಉದ್ದೇಶದಿಂದ ಸಹ್ಯಾದ್ರಿ ಕಾಲೇಜಿನ ಟೀಮ್ ಚಾಲೆಂಜರ್ಸ್ ಹಮ್ಮಿಕೊಂಡಿರುವ ಏರೋಫಿಲಿಯಾ-2017 ವಾರ್ಷಿಕ ಸ್ಪರ್ಧೆಯ ಅಂಗವಾಗಿ ಶುಕ್ರವಾರದಿಂದ ಆರಂಭವಾಗಿರುವ ರಾಷ್ಟ್ರಮಟ್ಟದ ಏರೋ ಮಾದರಿ ಸ್ಪರ್ಧೆಗೆ ಚಾಲನೆ ನೀಡಲಾಯಿತು.

ವಿದ್ಯಾರ್ಥಿಗಳು ತಾವು ತಯಾರಿಸಿದ ವಿಮಾನ ಮಾದರಿಗಳನ್ನು ಪ್ರದರ್ಶಿಸುವುದಕ್ಕೆ ಇಂತಹ ವೇದಿಕೆಯು ಸಹ್ಯಾದ್ರಿ ಕಾಲೇಜಿನಲ್ಲಿ ನಿರ್ಮಾಣವಾಗಿದ್ದು, ಸುಮಾರು 30ಕ್ಕೂ ಹೆಚ್ಚು ಏರೋ ಮಾದರಿಗಳ ಹಾರಾಟವೂ ಯಶಸ್ವಿಯಾಗಿ ನಡೆಯಿತು. ಬೆಂಗಳೂರು, ಪುತ್ತೂರು, ಕಾಸರಗೋಡು, ತಿರುವನಂತಪುರ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ದುಬೈ ಕಸ್ಟಮ್ಸ್ ಉದ್ಯೋಗಿ ಅಬ್ದುಲ್ಲಾಹ್ ಫಹೀಮ್ ಸಲೆಹನೆಜ್ಹಾದ್ ಮೊರಫಿ ಹಾಗೂ ದುಬೈನಲ್ಲಿ ಪೊಲೀಸ್ ಇಲಾಖೆಯಲ್ಲಿ ಉದ್ಯೋಗಿ ಆಗಿರುವ ಎಸ್ಸಾ ಸಹೀದ್ ಎಸ್ಸಾ ಬಿನಾಯ್ಲೊಫ್ ಪ್ರದರ್ಶನ ನೀಡಿದರು.



ಏರೋ ಮಾದರಿ ಶೋನಲ್ಲಿ ಮಾದರಿ ವಿಮಾನದ ಸಿದ್ಧತೆ. **ಪ್ರಜಾವಾಣಿ ಚಿತ್ರ**


ಎಐಎಸ್ಎಸ್ಎಂಎಸ್ ವಿದ್ಯಾರ್ಥಿ ವೈಭವ ವಿ. ನಾಯಕ ಹಾಗೂ ಐಐಎಸ್‌ಟಿ ತಿರುವನಂತಪುರದಲ್ಲಿ ಓದುತ್ತಿರುವ ಅರುಣ್ ನ್ಯಾಮಗೌಡರ್ ಅವರ ತಂಡವು ಬ್ಯಾಟರಿ ಚಾಲಿತ ಮಾದರಿ ವಿಮಾನಗಳನ್ನು ಆಕಾಶದತ್ತ ಹಾರಿಸುವ ಮೂಲಕ ಏರ್ ಶೋನಲ್ಲಿ ಎಲ್ಲರ ಗಮನ ಸೆಳೆದರು. ಬೆಂಗಳೂರಿನ ಏರ್ ಟ್ರಿಕ್ಸ್ ಏರೋಪ್ಲೇನ್ ತಂಡವು ಸುಮಾರು 10ಕ್ಕೂ ಹೆಚ್ಚು ಪೆಟ್ರೋಲ್ ಚಾಲಿತ ಹೆಲಿಕಾಪ್ಟರ್, ಜೆಟ್, ಏರ್‌ಕ್ರಾಫ್ಟ್ ಮಾದರಿಗಳು ರೆಕ್ಕೆ ಬಿಚ್ಚಿ ಹಾರಾಟ ನಡೆಸಿದ್ದವು. ಆದರೆ ಇವುಗಳ ಕಾರ್ಯವನ್ನು ರಿಮೋಟ್ ಮೂಲಕವೇ ನಿಯಂತ್ರಣ ಮಾಡಲಾಗುತ್ತಿತ್ತು.

'ಇದು ನನ್ನ ಮೊದಲ ಏರ ಶೋ ಪ್ರದರ್ಶನ, ತಿರುವನಂತಪುರ ಐಐಎಸ್‌ಟಿ ಕಾಲೇಜನ್ನು ಇಸ್ರೋದಲ್ಲಿ ಸೇರ್ಪಡೆ ಮಾಡುವ ಉದ್ದೇಶದಿಂದ ಈ ಶೋದಲ್ಲಿ ಪಾಲ್ಗೊಂಡಿದ್ದು, ಈ ಮಾದರಿಯನ್ನು ನಾಲ್ಕು ಜನರ ನಮ್ಮ ತಂಡವು ತಯಾರು ಮಾಡಿದ್ದು, ಏರೋನಾಟಿಕ್ಸ್ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡುವುದು ನಮ್ಮ ಹಂಬಲ' ಎಂದು ಬಿಇ ಏರೋ ಸ್ಪೇಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿ ಅರುಣ್ ನ್ಯಾಮಗೌಡರ್ ತಿಳಿಸಿದರು.

ಇನ್ನು ಡ್ರೋಣ್ ರೇಸ್ ಸ್ಪರ್ಧೆಯೂ ನಡೆದಿತ್ತು. 28ಕ್ಕೂ ಹೆಚ್ಚು ವಿದ್ಯಾರ್ಥಿಗಳು ಡ್ರೋಣ್ ರೇಸ್ ಶೋನಲ್ಲಿ ಪಾಲ್ಗೊಂಡಿದ್ದರು. ಪ್ರೌಢಶಾಲಾ ವಿದ್ಯಾರ್ಥಿಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲುದಾರಿಕೆ ಪಡೆದಿದ್ದರು. ಗಣಿತ, ಇತಿಹಾಸ, ಕಲೆ ವಿನ್ಯಾಸ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಸ್ಪರ್ಧೆ ಗಳು ನಡೆದವು.

ಫ್ಲೈಟ್ ಲೆಫ್ಟಿನೆಂಟ್ ಪ್ರೊ. ಬಿ. ಆರ್. ಕುಲಕರ್ಣಿ, ಎಂಜಿನಿಯರ್ ರಜನಿಕಾಂತ್ ಶಾಸ್ತ್ರಿ, ಪ್ರೊ. ಬಿ.ಎನ್. ಕರ್ಕೇರಾ, ಎಂ.ಆರ್. ವಾಸುದೇವ್, ಇಸ್ರೋ ಮಾಜಿ ವಿಜ್ಞಾನಿ ಎಂ.ಎಸ್. ಭಟ್, ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ದೇಶಕ ಜೆ.ಟಿ. ರಾಧಾಕೃಷ್ಣ, ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಮುಖ್ಯಸ್ಥ ಮಂಜುನಾಥ ಭಂಡಾರಿ ಇದ್ದರು.

DH
DECCAN HERALD
Saturday January 28, 2017
Pages 22 No 28 ₹6.00 www.deccanherald.com



# 'Aerophilia 2017' takes off

## Budding engineers operate metal birds, drones; Dubai duo steal show

**MANGALURU: 'Aerophilia 2017,' the two-day annual aeromodelling competition, made a start on Friday with budding designers in the realm, displaying their skills with metal birds at Sahyadri College of Engineering and Management.**

The twin grounds next to the canteen had turned into hot spots with curious onlookers, mostly students, witnessing the model planes, copters and drones, taking off with tad raucous sound, before making a dash into the air.

Unlike previous year, the event in its second year had a highlight in Abdullah Jaseem and Eessa, a two-member team of flight enthusiasts from Dubai. Abdullah works as manager (permits) with the port and customs, health and environment at the known city in united arab emirates (UAE), while Eesa works at rescue wing of Dubai police.







**(Clockwise from above) Students watch the inauguration of the 'drone race' as part of the two-day aeromodelling contest at Sahyadri College of Engineering and Management in Mangaluru on Friday. The 'Gaui NX7' series model chopper, seen in flight during the air show. Abdullah Jaseem and Eessa from Dubai with their model metal birds, ahead of the show.**

Mention must be made of 'Gaui NX7 series' of copter model designed by Jaseem, that runs on less than 250 ML of aviation turbo fuel (ATF), against most of the metal birds operated with the help of battery powered engine. The fuel lasts for maximum six minutes. Jaseem told *DH*, "It is also for the first time that I am (hand) operating the chopper in any air show after designing it in a short span of five days."

### Better response

In all, 30 student teams irrespective of age group representing different schools and colleges in the region have enrolled for the competition. It includes teams from AISSMS College of Engineering, Pune, Maharashtra, Indian Institute of Science and Technology (IIST), Thiruvananthapuram, Kerala, Sri Ramakrishna College, Srinivasa Institute of Technology, Delhi Public School, NMAM Institute of Technology, Vellore Institute of Technology (VIT), Tamil Nadu, MVJ College of Engineering and ACS College of Engineering, Bengaluru, Milagres High School, Manipal School Attavar, Mount Carmel Central School to name a few.

Drone race is another event for which 25 student teams have enrolled, with the spot registrations expected to increase the number of contestants.

Separate counters were opened for registration of teams, that have seen a rise this time, when the maiden aeromodelling contest held in 2016 saw just nine teams, said an official of the college.

The first prize winner will pocket Rs 75,000, second winner Rs 50,000 and third prize winner Rs 25,000.

**DH News Service**